# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ**

ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಮಹಾದ್ವಾರ, ಜಿ.ಕೆ.ವಿ.ಕೆ. ಆವರಣ,
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ ಬಡಾವಣೆ, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು-560097

ದೂರವಾಣಿ : 080-29721550, email: ksta.gok@gmail.com website: www.kstacademy.in


**ನಂ: ಕವಿತಂಅ/ಆಡಳಿತ/01/2021-22** **ದಿನಾಂಕ: 17/06/2021**

## ದರಪಟ್ಟಿ ಆಹ್ವಾನ ಪ್ರಕಟಣೆ

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾಗಿರುವ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ನೂತನವಾಗ ನಿರ್ಮಿಸಿರುವ ತರಬೇತುದಾರರ ತರಬೇತಿ ಕಟ್ಟಡಕ್ಕೆ ಅಗತ್ಯವಿರುವ ಈ ಕೆಳಕಂಡ ಪರಿಕರಗಳನ್ನು ಕರ್ನಾಟಕ ಸಾರ್ವಜನಿಕ ಪಾರದರ್ಶಕ ಸಂಗ್ರಹಣ ಅಧಿನಿಯಮ 1999 ಹಾಗೂ ಇದರ ನಿಯಮಗಳನ್ವಯ ಸರಬರಾಜು ಮಾಡಿ ಅಳವಡಿಸಲು ವಿವಿಧ ಸಂಸ್ಥೆಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

| Sl. No. | Description & Specification | Qty | Supply & Installation Period |
|---|---|---|---|
| 1 | LED Outdoor Ceiling light – 12 Watts | 14 No's | 15 Days |
| 2 | LED Outdoor Ceiling light – 18 Watts | 18 No's | |

***ಷರತ್ತುಗಳು ಮತ್ತು ನಿಬಂಧನೆಗಳು:***

1. ದರಪಟ್ಟಿಯನ್ನು ಅಕಾಡೆಮಿಯು ನೀಡಿರುವ ನಿಗದಿತ ನಮೂನೆಯಲ್ಲಿ ಮುದ್ರಿಸಿ ಸಲ್ಲಿಸಬೇಕು ಹಾಗೂ ಸರಬರಾಜು, ಅಳವಡಿಕೆ ವೆಚ್ಚ ಮತ್ತು ಜಿ.ಎಸ್.ಟಿ ವೆಚ್ಚವು ಸಹ ದರಪಟ್ಟಿಯಲ್ಲಿ ನಮೂದಿಸಿರಬೇಕು.
2. ದರಪಟ್ಟಿಯಲ್ಲಿ ಪರಿಕರಗಳ ವಿವರ, ಬ್ರಾಂಡ್ ಹೆಸರು, ವಾರೆಂಟಿ ಹಾಗೂ ಸಂಪೂರ್ಣ ವಿವರಣೆಯನ್ನು ಸ್ಪಷ್ಟವಾಗಿ ನಮೂದಿಸುವುದು.
3. ದರಪಟ್ಟಿಯನ್ನು ಸಲ್ಲಿಸುವ ಮುನ್ನ ಅಕಾಡೆಮಿಗೆ ಭೇಟಿ ನೀಡಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು ಹಾಗೂ ಸ್ಥಳ ಪರಿಶೀಲಿಸಬಹುದು.
4. ಪರಿಕರಗಳ ಸರಬರಾಜು ಮತ್ತು ಅಳವಡಿಕೆಗೆ ಯಾವುದೇ ಮುಂಗಡ ನೀಡಲಾಗುವುದಿಲ್ಲ.
5. ದರಪಟ್ಟಿಯನ್ನು ಮೊಹರು ಮಾಡಿದ ಲಕೋಟೆಯಲ್ಲಿ ದಿನಾಂಕ: 30/06/2021ರ ಸಂಜೆ 4.00 ಗಂಟೆಯೊಳಗಾಗಿ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸತಕ್ಕದ್ದು, ಸ್ವೀಕೃತಿ ವಿಳಂಬಕ್ಕೆ ಅಕಾಡೆಮಿಯು ಜವಾಬ್ದಾರಿಯಲ್ಲ.
6. ದರಪಟ್ಟಿ ಸಲ್ಲಿಸಿದ ಮಾತ್ರಕ್ಕೆ ಈ ಕಾರ್ಯದ ಒಪ್ಪಂದವನ್ನು ಸಾಧಿಸುವಂತಿಲ್ಲ. ಯಾವುದೇ ಕಾರಣ ನೀಡದೇ ದರಪಟ್ಟಿಯನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೊಂದಿರುತ್ತಾರೆ.
7. ಯಾವುದೇ ಕಾರಣ ಹೇಳದೆ ದರಪಟ್ಟಿ ಆಹ್ವಾನ ಪ್ರಕಟಣೆಯ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಅಕಾಡೆಮಿ ಉಳಿಸಿಕೊಂಡಿರುತ್ತದೆ.
8. ಬಿಡ್ಡುದಾರರು ಈ ಮೇಲ್ಕಂಡ ಷರತ್ತುಗಳಿಗೆ ಮತ್ತು ನಿಯಾಮಾವಳಿಗೆ ಬದ್ಧರಾಗಿ ದರಪಟ್ಟಿಯನ್ನು ಸಲ್ಲಿಸುವುದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಕವಿತಂಅ